ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಕರಾಸಾ/ಕೇಕ/ಆಡಳತ/ಎ1/1057/2015-16

ದಿನಾಂಕ: 19-02-2016
22

<u>ಸುತ್ತೋಲೆ ಸಂಖ್ಯೆ: 1578</u>

ವಿಷಯ: ಸಂಸ್ಥೆಯ ಅಧಿಕಾರಿಗಳು ಮತ್ತು ನೌಕರರಿಗೆ ವಸತಿಗೃಹ ವಿತರಣೆ ಮಾಡುವ ಸಂಬಂಧ ತಿದ್ದುಪಡಿ ನಿಯಮಗಳು

ಉಲ್ಲೇಖ:1.ಸರ್ಕಾರದ ಅಧಿಸೂಚನೆ ಸಂಖ್ಯೆ:ಪಿಡಬ್ಲ್ಯೂಡಿ:245:ಪಿಪಿಎಂ:96 ದಿನಾಂಕ:22-01-1999
2. ಕರಾಸಾ/ಕೇಕ/ಆಡಳತ/ವ-ಗೃ/103/2000-2001 ದಿನಾಂಕ: 10-05-2000
3. ಸಂಖ್ಯೆ:ಪಿಡಬ್ಲ್ಯೂಡಿ:18:ಪಿಪಿಎಂ:2009 ದಿನಾಂಕ:8-05-2015
4. ಸುತ್ತೋಲೆ ಸಂಖ್ಯೆ:1567:2015-16 ದಿನಾಂಕ:15-10-2015

******

ನಿಗಮದ ಅಧಿಕಾರಿ/ನೌಕರರಿಗೆ ವಸತಿಗೃಹವನ್ನು ಹಂಚಿಕೆ/ ತೆರವುಗೊಳಸಲು,ದಂಡಬಾಡಿಗೆ ವಿಧಿಸುವ ಕುರಿತಂತೆ ಮೇಲ್ಕಂಡ ಉಲ್ಲೇಖದ ಸರ್ಕಾರದ ಅಧಿಸೂಚನೆಗಳನ್ನು ನಿಗಮದಲ್ಲಿ ಅಳವಡಿಸಿಕೊಂಡು ಸುತ್ತೋಲೆಗಳನ್ನು ಹೊರಡಿಸಲಾಗಿದೆ.

ಉಲ್ಲೇಖ 4 ರ ಸುತ್ತೋಲೆಯಂತೆ ನಿಗಮದ ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ಅಧಿಕಾರಿಗಳು ಹಾಗೂ ಉದ್ಯೋಗಿಗಳು ವಸತಿಗೃಹ ಹಂಚಿಕೆ ಪಡೆದ ದಿನಾಂಕದಿಂದ ಕ್ರಮವಾಗಿ ಗರಿಷ್ಠ ಅವಧಿ 10 ವರ್ಷ ಹಾಗೂ 15 ವರ್ಷಗಳ ಕಾಲ ವಾಸವಿರಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ, ವಸತಿ ಗೃಹ ಹಂಚಿಕೆ ಪಡೆದು ಗರಿಷ್ಠ ಅವಧಿ ಪೂರೈಸಿರುವ ಅಧಿಕಾರಿ/ಉದ್ಯೋಗಿಗಳು ವಸತಿ ಗೃಹ ತೆರವುಗೊಳಸಬೇಕಾಗಿರುತ್ತದೆ.

ಆದರೆ, ಪ್ರಸ್ತುತ ಕೆಲವು ಕಛೇರಿ/ವಿಭಾಗ/ಕಾರ್ಯಾಗಾರಗಳ ವ್ಯಾಪ್ತಿಯ ವಸತಿಗೃಹಗಳಿಗೆ ಬೇಡಿಕೆ ಇಲ್ಲದೆ ಹೆಚ್ಚಿನ ಸಂಖ್ಯೆಯ ವಸತಿಗೃಹಗಳು ಖಾಲಿ ಉಳಿದಿರುವುದು ಕಂಡುಬಂದಿದ್ದು ಇದರಿಂದ, ಸಂಸ್ಥೆಗೆ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುತ್ತದೆ. ಆದಕಾರಣ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿದೆ.

1. ಸರ್ಕಾರದ ಅಧಿಸೂಚನೆ ಹಾಗೂ ನಿಗಮದ ಸುತ್ತೋಲೆಗಳ ನಿರ್ದೇಶನದಂತೆ ಯಾವುದೇ ವಿಭಾಗದಲ್ಲಿ ವಸತಿಗೃಹಗಳಗಾಗಿ ಬೇಡಿಕೆ ಇರುವ ಉದ್ಯೋಗಿ/ಅಧಿಕಾರಿಗಳ ಸಂಖ್ಯೆಗನುಗುಣವಾಗಿ ಮಾತ್ರ ಕಾಲಕಾಲಕ್ಕೆ ಗರಿಷ್ಠ ವಾಸದ ಅವಧಿ ಪೂರ್ಣಗೊಂಡ ಉದ್ಯೋಗಿಗಳನ್ನು ವರಿಷ್ಠತೆ ಮೇಲೆ ಖಾಲಿ ಮಾಡಿಸಿ ಸದರಿ ವಸತಿಗೃಹಗಳಗಾಗಿ ವರಿಷ್ಠತೆಯ ಮೇಲೆ ಕಾಯುತ್ತಿರುವ ಉದ್ಯೋಗಿಗಳಿಗೆ ಹಂಚಿಕೆ ಮಾಡುವುದು.

2. ವಸತಿಗೃಹಗಳಿಗೆ ಬೇಡಿಕೆ ಇಲ್ಲದಿರುವ ಯಾವುದೇ ಕಛೇರಿ/ವಿಭಾಗ/ಕಾರ್ಯಾಗಾರಗಳಲ್ಲಿ ಸರ್ಕಾರಿ ಅಧಿಸೂಚನೆ/ಸುತ್ತೋಲೆಯಂತೆ ಗರಿಷ್ಠ ವಾಸದ ಅವಧಿ ಪೂರೈಸಿರುವ ವಸತಿಗೃಹ ಹಂಚಿಕೆದಾರರನ್ನು ಮುಂದುವರೆಸಲು ಅಭ್ಯಂತರವಿಲ್ಲ.

3. ಸದರಿ ಮಾರ್ಪಾಡು ವ್ಯವಸ್ಥೆಯು ವಸತಿಗೃಹಗಳಿಗೆ ಬೇಡಿಕೆ ಇಲ್ಲದಿರುವ ಕಛೇರಿ/ವಿಭಾಗ/ಕಾರ್ಯಾಗಾರಗಳಿಗೆ ಮಾತ್ರ ಅನ್ವಯವಾಗುವುದು. ಉಳಿದಂತೆ ಮೇಲ್ಕಂಡ ಸರ್ಕಾರಿ ಅಧಿಸೂಚನೆ ಮತ್ತು ಸಂಸ್ಥೆಯ ಸುತ್ತೋಲೆಗಳಲ್ಲಿನ ನಿಯಮ/ಉಪ ನಿಯಮಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಗಳು:

1. ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ
2. ವ್ಯವಸ್ಥಾಪಕ ನಿರ್ದೇಶಕರ ಹಿರಿಯ ಆಪ್ತ ಕಾರ್ಯದರ್ಶಿಗಳು/ನಿರ್ದೇಶಕರು (ಸಿ:ಪ)/(ಭ:ಜಾ) ರವರ ಆಪ್ತ ಕಾರ್ಯದರ್ಶಿಗಳು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
3. ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಕರಾರಸಾ ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಎಲ್ಲಾ ಇಲಾಖಾ/ವಿಭಾಗೀಯ/ಕಾರ್ಯಾಗಾರ ಮುಖ್ಯಸ್ಥರುಗಳು, ಕರಾರಸಾ ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.